## ಪ್ರತಿಭೆಯ ಕಗ್ಗೊಲೆ

ಡ್ರಾಮಾ ಜ್ಯೂನಿಯರ್‌ನಲ್ಲಿನ ಅಮೋಘ ಅಭಿನಯದಿಂದಾಗಿ 'ಜನ್ಮ ಜಾತ ಪ್ರತಿಭೆ' ಎಂದು ನಟಿ ಲಕ್ಷ್ಮೀ, ನಿರ್ದೇಶಕ ಸೀತಾರಾಂರವರಿಂದ ಪ್ರಶಂಸೆ ಗಳಿಸಿದ್ದ ಬಾಲನಟಿ ಚಿತ್ರಾಲಿ, ಕೋಟ್ಯಂತರ ಜನರ ಪ್ರೀತಿ, ಅಭಿಮಾನ ಗಳಿಸಿದ್ದರು. ಚಿತ್ರಾಲಿಯ ಧಾರಾವಾಹಿಯೆಂದಾಗ ಅಪಾರ ನಿರೀಕ್ಷೆಗಳಿದ್ದವು. ಅದನ್ನು ಕ್ಷಣ ಮಾತ್ರದಲ್ಲಿ ಧೂಳೀಪಟ ಮಾಡಿದ ಕುಖ್ಯಾತಿ 'ವಾರಸ್ದಾರ' ತಂಡಕ್ಕೆ ಸಲ್ಲುತ್ತದೆ. ತೆಲುಗು ಸಿನಿಮಾವೊಂದರ ರೀಮೇಕಿನಂತೆ ತೋರಿಬರುವ ಧಾರಾವಾಹಿಯಲ್ಲಿ ಅಬ್ಬರ, ಹಾರಾಟ, ಚೀರಾಟ, ರುದ್ರವಂಶ, ಸಿಂಹವಂಶಗಳೆಂದು ಹೇಳುವ ಡೈಲಾಗುಗಳು ಹಾಸ್ಯಾಸ್ಪದವಾಗಿ ಕಾಣುತ್ತವೆ. ಇಡೀ ಧಾರಾವಾಹಿಯಲ್ಲಿ ಎಲ್ಲೂ ಕನ್ನಡತನ ಕಾಣುವುದಿಲ್ಲ.

—ಇಂದು, ತಿಪಟೂರು

## ಹುಸಿ ಜ್ಯೋತಿಷ

ಇತ್ತೀಚೆಗೆ ಟಿವಿಯಲ್ಲಿ ಭವಿಷ್ಯ ಹೇಳುವವರ ಸಂಖ್ಯೆ ಹೆಚ್ಚಾಗುತ್ತಿದೆ. ಅವರಿಗೆ ತಮ್ಮ ತಮ್ಮ ಭವಿಷ್ಯವೇ ಗೊತ್ತಿರುವುದಿಲ್ಲ ಇನ್ನು ಬೇರೆಯವರ ಭವಿಷ್ಯವನ್ನು ಏನು ಹೇಳುತ್ತಾರೆ ಇದಕ್ಕೆ ಉದಾ: ನರೇಂದ್ರ ಬಾಬು ಶರ್ಮಾ ಬ್ರಹ್ಮಾಂಡ ಗುರೂಜಿ ಒಮ್ಮೆ ಟಿ.ವಿ.ಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರಿಗೆ ದೊಡ್ಡ ಕಂಟಕವಿದೆ ಎಂದು ಹೇಳಿದ್ದರು. ನಮಗೆಲ್ಲಾ ಗಾಬರಿ. ದಿನಾಲೂ ಟಿ.ವಿ. ನೋಡಿ ನಿಟ್ಟುಸಿರು ಬಿಡುತ್ತಿದ್ದೆವು. ಆದರೆ ಇತ್ತೀಚೆಗೆ ನರೇಂದ್ರ ಬಾಬುರವರೇ ಟಿ.ವಿ.ಯಲ್ಲಿ ಭವಿಷ್ಯ ಹೇಳಲು ಬಂದಿಲ್ಲ ಯಾಕೋ ಅವರಿಗೇನಾದರೂ ಕಂಟಕ ಬಂದಿದೆಯೇ? ಭವಿಷ್ಯ ನಂಬಿದರೆ ಹಾನಿಯೇ ಹೆಚ್ಚು. ಇಂಥ ಕಪಟ ಜ್ಯೋತಿಷ ಕಾರ್ಯಕ್ರಮದ ಬದಲು ಚೆನ್ನಾಗಿರೋ ಇನ್ನೇನಾದರೂ ಹಾಕಿದರೆ ಒಳಿತು.

—ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ

ವಾರದ ಪತ್ರ

## ಸಾಮಾಜಿಕ ಕಳಕಳಿ ಇಲ್ಲವೇ?

ಕೇಂದ್ರ ಸರಕಾರ ಪ್ರಾಯೋಗಿಕವಾಗಿ 'ದಡಾರ' ಮತ್ತು 'ರುಬೆಲ್ಲಾ' ಕಾಯಿಲೆಗಳಿಗೆ ಲಸಿಕೆ ಹಾಕುವ ಕಾರ್ಯಕ್ರಮವನ್ನು ಕರ್ನಾಟಕ, ತಮಿಳುನಾಡು, ಪುದುಚೇರಿ, ಗೋವಾ ಮತ್ತು ಲಕ್ಷ ದ್ವೀಪಗಳಲ್ಲಿ ಫೆಬ್ರುವರಿ 6 ರಿಂದ 28ರ ವರೆಗೆ ಹಮ್ಮಿಕೊಂಡಿತ್ತು. 9 ತಿಂಗಳಿನಿಂದ 15 ವರ್ಷದ ಒಳಗಿನ ಮಕ್ಕಳಿಗೆ ಒಂದು ಬಾರಿ ಲಸಿಕೆಯನ್ನು ಹಾಕುವುದು. ಈ ಬಗ್ಗೆ ಚಂದನ ವಾಹಿನಿಯಲ್ಲಿ ಸತತವಾಗಿ ಜಾಹೀರಾತು. ಕೆ.ಎಸ್.ಆರ್.ಟಿ.ಸಿ. ಪ್ರಯಾಣಿಕರ ಟಿಕೆಟ್‌ನಲ್ಲಿ ಈ ವಿಷಯ ಮುದ್ರಿಸಿ ಸಾರ್ವಜನಿಕರಲ್ಲಿ ಜಾಗೃತಿಯನ್ನಂಟು ಮಾಡಿತು. ಆರೋಗ್ಯದ ಬಗ್ಗೆ ಸಾಮಾಜಿಕ ಕಳಕಳಿಯ ದ್ಯೋತಕ ಯಾವ್ಯಾವುದೋ ಕಾರ್ಯಕ್ರಮವನ್ನು ಬೆಳಗಿನಿಂದ ಸಂಜೆಯವರೆಗೂ ಕೂರೆದು ಪ್ಯಾನಲ್ ಡಿಸ್ಕಶನ್ ಮಾಡುವ ಇತರೆ ಕನ್ನಡ ಚಾನೆಲ್‌ಗಳಲ್ಲಿ ಚರ್ಚೆ ಆಗಲಿಲ್ಲ. ಚಂದನಕ್ಕಿರುವ ಜವಾಬ್ದಾರಿ, ಕಳಕಳಿ ಬೇರೆ ವಾಹಿನಿಗೆ ಇಲ್ಲವೇ?

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ಸರೆಗಮಪ ಎತ್ತ ಸಾಗುತ್ತಿದೆ

ಸರೆಗಮಪ ಬರಬರುತ್ತಾ ತನ್ನ ಅಸಲೀ ಸೊಗಡನ್ನು ಕಳೆದುಕೊಳ್ಳುತ್ತಿದೆ ಎಂದರೆ ಅತಿಶಯವಾಗಲಾರದು. ಸ್ಪರ್ಧೆಯಲ್ಲಿಲ್ಲದ ಆದ್ಯಳನ್ನು ಮತ್ತೆಮತ್ತೆ ಕರೆದು ಹಾಡಿಸುವುದು. ಆ ಮಗುವಿಗೆ ದೀರ್ಘಕಾಲ ಕೊಡುವುದು. ಸ್ಪರ್ಧಿಯಾದ ಸುಹಾನಳನ್ನು ಹೆಚ್ಚು ವೈಭವೀಕರಿಸುವುದು. ಅದೇ ತೀರ್ಪುಗಾರರು, ಆಂಕರಿಂಗ್, ಫ್ಲರ್ಟಿಂಗ್ ಅನಗತ್ಯ. ಅವರ ಗಬ್ಬುಹಾಸ್ಯ ವೀಕ್ಷಕರನ್ನು ಚಿಟ್ಟುಹಿಡಿಯುವಂತೆ ಮಾಡಿದೆ. ಯಾವುದಕ್ಕೂ ಒಂದು ಮಿತಿಯಿರಬೇಕು.

—ಮೂಲೆಮನೆ ರತ್ನಾಕರ ಭಿಡೆ, ಪಿ.ಚಂದ್ರಕಲಾ ಬೆಂಗಳೂರು.

## ಕೊನೆ ಕಾಣದ ಧಾರಾವಾಹಿಗಳು

ವೀಕ್ಷಕರು ಗಮನಿಸಿದಂತೆ 'ಕಲರ್ಸ್ ಕನ್ನಡ' ಚಾನೆಲ್‌ನಲ್ಲಿ ಸೋಮವಾರದಿಂದ ಶನಿವಾರ ಸಂಜೆ 6 ಗಂಟೆಯಿಂದ 9 ಗಂಟೆವರೆಗೆ ಪ್ರಸಾರವಾಗುತ್ತಿರುವ ಮುಸ್ಸಂಜೆಯ ಧಾರಾವಾಹಿಗಳು ಕೊನೆಗೊಳ್ಳುವ ಯಾವುದೇ ಲಕ್ಷಣಗಳು ಕಾಣಿಸುತ್ತಿಲ್ಲ. ಇನ್ನೇನು ಮುಗಿಯಬಹುದು ಎಂದು ನಿಟ್ಟುಸಿರು ಬಿಡುವ ವೇಳೆಗೆ, ಯಾವುದೋ ದೆವ್ವವೋ ಭೂತವೋ ಬಂದು ಮುನ್ನಡೆಸಿ, ಮತ್ತೆ ತೆವಳಲು ಪ್ರಾರಂಭಿಸುತ್ತದೆ.

'ಗಾಂಧಾರಿ' ಧಾರಾವಾಹಿ ಹೆಸರಿಗೂ, ಕತೆಗೂ, ಪೋಣಿಸಿರುವ ಘಟನೆಗಳಿಗೂ ತಾಳೆಯಿಲ್ಲದಿದ್ದರೂ, ಪಾತ್ರಗಳು ಚೆನ್ನಾಗಿವೆ. 'ಮಲ್ಲಪ್ಪ'ನ ಪಾತ್ರವಂತೂ ಅತ್ಯಂತ ಶ್ಲಾಘನೀಯ. ಅದನ್ನು ನಿರ್ವಹಿಸುವವರ ನಟನೆಯಂತೂ ಅದ್ಭುತ. ಇದನ್ನು ಅನಗತ್ಯ ಎಳೆಯದೆ ತಾರ್ಕಿಕ ಅಂತ್ಯವನ್ನು ಕಾಣಿಸಲಿ ಎಂಬುದು ಆಶಯ.

—ವಿ.ಕೆ.ದ್ವಾರಕಾ ನಾಥ್, ಸಂಜಯನಗರ

## ಅಂದಗೆಡದಿರಲಿ 'ಅಂಜಲಿ'

ಝೀ ಕನ್ನಡದ 'ಅಂಜಲಿ' ಧಾರಾವಾಹಿ ಕುತೂಹಲ ಭರಿತವಾಗಿದೆ. ಅಂಜಲಿ ಪಾತ್ರ ನಿರ್ವಹಿಸುತ್ತಿರುವ ಆ ಪುಟ್ಟ ಮಗುವನ್ನು ದೊಗಲೆ ಅಂಗಿ, ಕೆಂಪು ಪುಟ್ಟ ಶೂಗಳಲ್ಲಿ ನೋಡಲು ನಾವೆಲ್ಲ ಕಾಯುತ್ತಿರುತ್ತೇವೆ. ಮುದ್ದು ಅಂಜಲಿಯ ಮುಖದಲ್ಲಿ ಎರಡೂ ಕಡೆ ಮೂಡುವ ಕುಳಿಗಳು, ಆ ಕಿಲಕಿಲ ನಗು, ಸರಳವಾಗಿ ಮಾತನಾಡುವ ರೀತಿ ಚೆನ್ನಾಗಿದೆ. ಮಗು ಸಹಜವಾಗಿ ಆ ಪಾತ್ರದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಪಾತ್ರದಲ್ಲಿ ಲೀನವಾಗಿ ನೋಡುಗರೆಲ್ಲರ ಮನ ಸೆಳೆದು ಸಂತಸ ನೀಡುತ್ತದೆ.

ಇತ್ತೀಚೆಗೆ ಅಂಜಲಿಯ ಸಮಯವನ್ನು ಮಂತ್ರವಾದಿ ಮತ್ತು ಇತರೆ ಪಾತ್ರಗಳು ಆವರಿಸಿಕೊಂಡಿವೆ. ಇದರಲ್ಲಿ ಯಾವುದೇ ಹೊಸತನವಿಲ್ಲ. ಯಾವುದೋ ಒಂದು ಹಳೆಯ ಚಲನಚಿತ್ರದ ದೃಶ್ಯ ಕಣ್ಣಮುಂದೆ ಬಂದ ಅನುಭವವಾಗುತ್ತದೆ.

—ಪ.ಚಂದ್ರಕುಮಾರ ಗೌನಹಳ್ಳಿ.

## ಈ ಕಲಸುಮೇಲೋಗರವೇಕೆ?

ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿರುವ ಧಾರಾವಾಹಿಗಳು 'ಗಾಂಧಾರಿ' ಮತ್ತು 'ಮನೆದೇವ್ರು'. ದಿನಾಂಕ 27.3.2017 ರಿಂದ ಸಮ್ಮಿಳಿತಗೊಂಡು 'ಮನೆ ದೇವ್ರು ಬಳಿ ಗಾಂಧಾರಿ' ಎಂದು ಪ್ರಸಾರವಾಗುತ್ತಿದೆ. ಇದರ ಹಿಂದಿರುವ ಕಾರಣ ತಿಳಿದಿಲ್ಲ. ಈ ನೂತನ ಪ್ರಯೋಗದಿಂದ 'ಗಾಂಧಾರಿ' ಧಾರಾವಾಹಿಯನ್ನು ವೀಕ್ಷಿಸುತ್ತಿದ್ದ ನೋಡುಗರಿಗೆ ಹಾಗೂ 'ಮನೆ ದೇವ್ರು' ವೀಕ್ಷಕರಿಗೆ ಬೇಸರವಾಗುವುದು ಸಹಜ. ಆಯಾಯ ಧಾರಾವಾಹಿಗಳನ್ನು ಪ್ರತ್ಯೇಕವಾಗಿ ವೀಕ್ಷಿಸಿ ಅದನ್ನು ಆಸ್ವಾದಿಸುವುದು ವೀಕ್ಷಕರಿಗೆ ಬಿಟ್ಟಿದ್ದು. ಇದನ್ನು ವಂಚಿಸುವುದರಿಂದ ದೊರಕುವ ಲಾಭವಾದರೂ ಏನು ಎನ್ನುವುದು ಅರಿವಿಗೆ ಬಾರದ ವಿಷಯ. ನಿರ್ದೇಶಕರು ನೋಡುಗರ ಈ ಮನದಾಳವನ್ನು ಅರಿತು, ಮೊದಲಿನಂತೆ ಪ್ರತ್ಯೇಕವಾಗಿ ಪ್ರಸಾರ ಮಾಡುವುದು ಒಳಿತು.

—ಸುಂದರ್, ಬೆಂಗಳೂರು

## ಆದರ್ಶಕ್ಕೆ ಆದ್ಯತೆ ಇರಲಿ

'ಝೀ ಕನ್ನಡ 'ವೀಕ್ ಎಂಡ್ ವಿತ್ ರಮೇಶ್'— ಮೂರನೇ ಭಾಗವನ್ನು ಪ್ರಸಾರ ಮಾಡುತ್ತಿದೆ. ಈ ಹಿಂದೆ ಎರಡು ಭಾಗಗಳಲ್ಲಿ ಸಿನಿಮಾ ತಾರೆಗಳಾದ ದ್ವಾರಕೀಶ್, ಸುದೀಪ್, ಸುಧಾರಾಣಿಯವರನ್ನು ಪರಿಚಯಿಸಲಾಯಿತು. ಈಗ ಮೂರನೇ ಭಾಗದ ಪ್ರಾರಂಭಕ್ಕೆ ಪ್ರಕಾಶ್ ರೈ ಪರಿಚಯ ಮಾಡಿಕೊಟ್ಟಿದೆ. ಪರಿಚಯದಲ್ಲಿ ಇವರೆಲ್ಲರ ಚಿಕ್ಕಂದಿನ ಓದು, ಸ್ನೇಹಿತರು, ಬಂಧು ಬಳಗ, ಶಾಲೆ—ಕಾಲೇಜು, ಶಿಕ್ಷಕ ಹಾಗೂ ಬೋಧಕ ವರ್ಗದವರನ್ನು ಚಾಚೂ ತಪ್ಪದೆ ಪರಿಚಯಿಸಿ ಹೆಚ್ಚಿನವರಿಂದ ಅತಿಶಯೋಕ್ತಿ ಎನಿಸುವಂತೆ ಹಾಡಿ ಹೊಗಳಿಸಿತು. ಇಂತಹ ಸಾಧಕರ ಸಾಂಸಾರಿಕ ಬದುಕು ಅಷ್ಟಕ್ಕಷ್ಟೆ. ಇವರೆಲ್ಲ ಯಾವ ಬಗೆಯಲ್ಲಿ ಇತರರಿಗೆ ಆದರ್ಶಪ್ರಾಯರು! ಇದನ್ನು ಹೊರತಾಗಿ ಸಮಾಜಮುಖಿ ವ್ಯಕ್ತಿಗಳನ್ನೂ ಪರಿಚಯಿಸಲಿ.

—ಎಂ.ಎನ್. ರಾಜೇಶ್ವರಿ,ಬೆಂಗಳೂರು, ಲಕ್ಷ್ಮೀ ನರಸಿಂಹ ಚಾಮರಾಜನಗರ, ಕೆ.ಪಿ.ಅಶ್ವಿನ್ ರಾವ್ ಪದವಿನಂಗಡಿ, ಬೋಂದೇಲ್.